FDP No.1/2021
Rw.1

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಚಿಕ್ಕೋಡಿ.

ಸಾಕ್ಷಿಯನ್ನು ದಿನಾಂಕ 06-09-2025 ರಂದು ಪ್ರಮಾಣೀಕರಿಸಲಾಯಿತು.

ಪಾಟೀಸವಾಲು- ಅರ್ಜಿದಾರ ಪರ ವಕೀಲರಿಂದಃ

1) ನಾನು ವಿದ್ಯಾಭ್ಯಾಸ ಮಾಡುತ್ತಿದ್ದೆನೆ. ನಾನು ಈಗ ಬಿಬಿ ಎ 3 ಸೇಮಿಸ್ಟರನಲ್ಲಿ ಕಲಿಯುತ್ತಿದ್ದೆನೆ. ನನ್ನ ಜನ್ಮ ದಿನಾಂಕ 10-06-2005 ಇರುತ್ತದೆ. ಅರ್ಜಿದಾರರ ಪರಿಚಯ ಇದೆ. ಜಯಶ್ರೀ ರವರು ಎದುರುದಾರ 1 ರವರ ಹೆಂಡತಿ ಎಂದರೆ ಸರಿ. ಅರ್ಜಿದಾರ 1 ಮತ್ತು 2, ಜಯಶ್ರೀ ಮತ್ತು ಎದುರುದಾರ 1 ರವರ ಮಕ್ಕಳು ಎಂದರೆ ಸರಿ. ಜಯಶ್ರೀ ಮತ್ತು ಬಾಜಿರಾವರ ಮದುವೆ 1989 ರಲ್ಲಿ ಆಗಿತ್ತು ಎಂದರೆ ನನಗೆ ಗೋತ್ತಿಲ್ಲ. ಅಂಕಿತಾ ರವರ ವಯಸ್ಸು 33 ಆಗಿದೆ ಎಂದರೆ ಸರಿ. ಅಕ್ಷತಾ ರವರ ವಯಸ್ಸು 30 ಎಂದರೆ ಸರಿ. ಜಯಶ್ರೀ ಎದುರುದಾರ 1 ರವರ ಜೊತೆಯಲ್ಲಿ ವಿವಾಹವಾದ ನಂತರ 1996 ರ ವರೆಗೆ ಅವರ ಜೊತೆಯಲ್ಲಿ ಬಾಳುವೆ ವಾಡಿರುತ್ತಾರೆ ಎಂದರೆ ಸರಿ. 2007 ರಲ್ಲಿ ಜಯಶ್ರೀ ರವರು ಎದುರುದಾರ 1 ರ ವಿರುದ್ದ ಪೋಟಗೆ ಕೇಳಿ ಪ್ರಕರಣ ದಾಖಲ ಮಾಡಿರುತ್ತಾರೆ ಎಂದರೆ ಸರಿ. ಆ ಪ್ರಕರಣದಲ್ಲಿ ಜೀವನಾಂಶ ಕೊಡಬೇಕು ಎಂದು ಆದೇಶ ಆಗಿದೆ ಎಂದರೆ ಸರಿ. 2011 ರಲ್ಲಿ ಎದುರುದಾರರು ದಾವಾ ಆಸ್ತಿಗಳನ್ನು ಮಾರಟ ಮಾಡಲು ಪ್ರಯತ್ನಿಸಿದಾಗ ಜಯಶ್ರೀ ಮತ್ತು ಅರ್ಜಿದಾರರು ಮಾನ್ಯ 1ನೇ ದಿವಾಣಿ ನ್ಯಾಯಾಲಯದಲ್ಲಿ ಜೀವನಾಂಶ ಕೇಳಿ ದಾವೆಯನ್ನು ದಾಖಲಿಸಿರುತಾರೆ ಎಂದರೆ ನನಗೆ ಗೋತ್ತಿಲ್ಲ.

2) ಎದುರುದಾರ 1 ರವರು ನನಗೆ ತಂದೆ ಆಗಬೇಕು. ನನ್ನ ತಾಯಿಯ ಹೆಸರು ಸುಜಾತಾ ಅವರು ಪ್ರಸ್ತುತ ಪ್ರಕರಣದಲ್ಲಿ ಎದುರುದಾರ 2 ಆಗಿರುತ್ತಾರೆ. ಎದುರುದಾರ 1 ಮತ್ತು 2 ರವರ ವಿವಾಹ 2000ರಲ್ಲಿ ಆಗಿರುತ್ತದೆ ದಿನಾಂಕ ನೆನಪಿಲ್ಲ. ಸದರಿ ವಿವಾಹ ಸದಲಗಾದಲ್ಲಿ ಆಗಿರುತ್ತದೆ. ಅವರ ವಿವಾಹದ ಬಗ್ಗೆ ನನ್ನ ಬಳಿ ಯಾದಿ ಇರುತ್ತದೆ. ಸದರಿ ಯಾದಿ ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ. 2018 ರಲ್ಲಿ ಅಸಲ ದಾವಾ ನಂ.50/2018 ರಂತೆ ದಾವಾ ಆಸ್ತಿಗಳಲ್ಲಿ ಪಾಲು ಬೇಕೆಂದು ನಾನು ದಾವೆಯನ್ನು ಹಾಕಿರುತ್ತೆನೆ ಎಂದರೆ ಸರಿ. ಸದರಿ ದಾವೆ ನಾನು ಪ್ರಕರಣ ನಡೆಸಿಲ್ಲ ಎಂದು ವಜಾ ಗೋಂಡಿರುತ್ತದೆ ಎಂದರೆ ನೆನಪಿಲ್ಲ. 2020 ರಲ್ಲಿ ನಾನು ಮತ್ತು ನನ್ನ ತಾಯಿ ಅಸಲ ದಾವಾ ನಂ. 128/2020 ರಂತೆ ದಾವಾ ಆಸ್ತಿಗಳಲ್ಲಿ ಪಾಲನ್ನು ಕೇಳಿ ದಾವಾ ಹಾಕಿರುತ್ತೆವೆ ಎಂದರೆ ಸರಿ. ಆರ್ ಎ . ನಂ. 20/2020 ರ ಬಗ್ಗೆ ನನಗೆ ಮಾಹಿತಿ ಇಲ್ಲ.

3) ಪ್ರಸ್ತುತ ಅರ್ಜಿಯನ್ನು ದಾವಾ ಆಸ್ತಿಗಳಲ್ಲಿ ಪಾಲು ಬೇಕೆಂದು ಹಾಕಿರುತ್ತೆನೆ. ಸದರಿ ಆಸ್ತಿಗಳು ಈಗ ನನ್ನ ತಂದೆ ಹೆಸರಿನಲ್ಲಿ ಇರುತ್ತವೆ. ಎದುರುದಾರ 1 ರವರಿಗೆ ಇಬ್ಬರೂ ಜನ ಸಹೋದರರು ಇರುತ್ತಾರೆ. ಬಾಜಿರಾವ ಮತ್ತು ಅವರ ಸಹೋದರರ ಮಧ್ಯ ಪಾಲಾ ಆಗಿರುತ್ತದೆ.

4) ಎದುರುದಾರ 1 ಮತ್ತು 2 ರವರು ನನ್ನ ತಂದೆ ತಾಯಿ ಎಂದು ಸುಳ್ಳು ಎಂದರೆ ಸರಿ ಅಲ್ಲ. ಎದುರುದಾರರು ನನ್ನ ತಂದೆ ಅಲ್ಲ ಎಂದರೆ ಸರಿ ಅಲ್ಲ. ಎದುರುದಾರ 1 ಮತ್ತು 2 ರವರ ವಿವಾಹ ಆಗಿಲ್ಲ ಎಂದರೆ ಸರಿ ಅಲ್ಲ. ಆ ಕಾರಣ ದಾವಾ ಆಸ್ತಿಗಳಲ್ಲಿ ಯಾವುದೇ ಪಾಲು ಬರುವುದಿಲ್ಲ ಎಂದರೆ ಸರಿ ಅಲ್ಲ. ನಾನು ಸುಳ್ಳು ದಾಖಲಾತಿಗಳನ್ನು ಹಾಜರು ಮಾಡಿರುತ್ತೆನೆ ಎಂದರೆ ಸರಿ ಅಲ್ಲ. ಅರ್ಜಿದಾರರು ದಾಖಲಿಸಿರುವಂತಹ ಅಸಲ ದಾವಾ 463/2014 ರಲ್ಲಿ ನನಗೆ ಉದ್ದೇಶ ಪೂರ್ವಕವಾಗಿ ಪಾರ್ಟಿ ಮಾಡಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ. ಆಗ ಮತ್ತು ಈಗೂ ನನಗೆ ದಾವಾ ಆಸ್ತಿಗಳಲ್ಲಿ ಪಾಲು ಇಲ್ಲದೆಇದ್ದಿದ್ದಕ್ಕಾಗಿ ಪಕ್ಷಗಾರನಾಗಿ ಮಾಡುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿ ಅಲ್ಲ. ಎದುರುರದಾರ 1 ರವರ ಮಾತು ಕೇಳಿ ಅರ್ಜಿದಾರರಿಗೆ ನುಕ್ಸಾನ ಮಾಡಬೇಕೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂ.ಗಳು, ಚಿಕ್ಕೋಡಿ.